ಬೀದರ್ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಉಪಾಧ್ಯಾಯರ ನೇಮಕದ ಬಗ್ಗೆ

೨೫೯. ಡಾ. ವಿಜಯಕುಮಾರ್ ಖಂಡ್ರೆ (ಬಾಲ್ಕಿ).— ಮಾನ್ಯ ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಎಷ್ಟು ಉಪಾಧ್ಯಾಯರು ಬೇಕಾಗಿದೆ ಎಂಬುದನ್ನು ಸರ್ಕಾರವು ಲೆಕ್ಕ ಮಾಡಿದೆಯೇ ?

ಆ) ಹಾಗಿದ್ದರೆ ಸರ್ಕಾರಿ ಪ್ರೌಢಶಾಲೆಗಳಿಗೆ ಮತ್ತು ಪ್ರಾಥಮಿಕ ಶಾಲೆಗಳಿಗೆ ಹೆಚ್ಚುವರಿಯಾಗಿ ಎಷ್ಟು ಶಿಕ್ಷಕರು ಬೇಕಾಗಿದ್ದಾರೆ ?

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರವು ಕೈಗೊಂಡ ಕ್ರಮ ?

ಶ್ರೀ ಕೆ. ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು).—

ಅ) ಮಾಡಿದೆ.

ಆ) ೧) ಸರ್ಕಾರಿ ಪ್ರೌಢಶಾಲೆಗಳಿಗೆ — ೭೫ ಶಿಕ್ಷಕರು.

೨) ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ — ೭೩೭ ಶಿಕ್ಷಕರು ಹೆಚ್ಚುವರಿಯಾಗಿ ಬೇಕಾಗಿದ್ದಾರೆ.

ಇ) ಈಗ ಹಾಲಿ ಖಾಲಿ ಇರುವ ೬೨ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ೧೧೪ ಪ್ರೌಢಶಾಲೆ ಶಿಕ್ಷಕರು ಹುದ್ದೆಗಳನ್ನು ಆರ್ಥಿಕ ಮಿತವ್ಯಯ ಆದೇಶವನ್ನು ಹಿಂತೆಗೆದುಕೊಂಡ ನಂತರ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗಿದೆ.

ಕರ್ನಾಟಕದಲ್ಲಿ ಗಂಧದ ಮರ ಮತ್ತು ಆನೆ ದಂತಗಳ ಕಳ್ಳಸಾಗಾಣಿಕೆಯ ಬಗ್ಗೆ

೧೮೫. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಕೃಷಿ, ತೋಟಗಾರಿಕೆ ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿ ಗಂಧದ ಮರ, ಆನೆ ದಂತಗಳ ಕಳ್ಳ ಸಾಗಾಣಿಕೆಯನ್ನು ತಪ್ಪಿಸಲು ಕೈಗೊಂಡಿರುವ ಕ್ರಮಗಳೇನು ?

ಆ) ಕಳ್ಳಸಾಗಾಣಿಕೆದಾರರನ್ನು ಈವರೆವಿಗೂ ಬಂಧಿಸದಿರಲು ಕಾರಣವೇನು ? ಹಾಗೂ ಬಂಧಿಸಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ. ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು).—

ಅ) ರಾಜ್ಯದಲ್ಲಿ ಗಂಧದ ಮರ, ಆನೆ ದಂತಗಳ ಮತ್ತು ಇತರ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯನ್ನು ತಪ್ಪಿಸಲು ಅರಣ್ಯ ಸಂಚಾರಿ ದಳದ ಸಿಬ್ಬಂದಿಯವರಿಗೆ ವಾಹನಗಳು, ವೈರ್‌ಲೆಸ್ ಉಪಕರಣಗಳು, ಒಂದೂಕುಗಳನ್ನು ಒದಗಿಸಲಾಗಿದೆ. ಆಯಕಟ್ಟಿನ ಪ್ರದೇಶಗಳಲ್ಲಿ ಹೆಚ್ಚಿನ ಜಾಗರೂಕತೆಯಿಂದ ಅರಣ್ಯ ಸಿಬ್ಬಂದಿ ಮತ್ತು ಪೋಲೀಸ್ ಸಿಬ್ಬಂದಿಯವರು ಗಸ್ತು ತಿರುಗುತ್ತಾ ಕಳ್ಳಸಾಗಾಣಿಕೆಯನ್ನು ತಡೆಗಟ್ಟುತ್ತಿದ್ದಾರೆ. ಕಳ್ಳಸಾಗಾಣಿಕೆ ಪ್ರಕರಣದ ಸುಳಿವನ್ನು ನೀಡುವವರಿಗೆ ಇಲಾಖೆಯಿಂದ ಪಾರಿತೋಷಕಗಳನ್ನು ನೀಡಲಾಗುತ್ತಿದೆ. ಕಳ್ಳಸಾಗಾಣಿಕೆಯಲ್ಲಿ ತೊಡಗಿದ ವಾಹನಗಳನ್ನು ಮಾಲಿನ ಸಹಿತ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತಿದೆ ೧೯೮೬ನೇ ಸಾಲಿನ ನಂತರ ಸರ್ಕಾರವು ದಾಖಲು ಮಾಡಿದ ಶ್ರೀಗಂಧದ ಮತ್ತು ಆನೆ ದಂತಗಳ ಕಳ್ಳಸಾಗಾಣಿಕೆಯ ಪ್ರಕರಣಗಳ ಸಂಖ್ಯೆ, ಹಾಗೂ ವಶಪಡಿಸಿಕೊಂಡ ವಾಹನಗಳ ಮತ್ತು ಇತರೆ ಸ್ವತ್ತಿನ ಪ್ರಮಾಣ ಹಾಗೂ ಅದರ ಮೌಲ್ಯ ಪುಟ ೨ರಲ್ಲಿ ಕೊಟ್ಟಿದೆ.

ಆ) ಕಳ್ಳ ಸಾಗಾಣಿಕೆದಾರರನ್ನು ಈವರೆವಿಗೂ ಬಂಧಿಸಿಲ್ಲ ಎನ್ನುವುದು ಸರಿಯಲ್ಲ. ಹೆಚ್ಚಿನ ಪ್ರಕರಣಗಳಲ್ಲಿ ಕಳ್ಳ ಸಾಗಾಣಿಕೆಯ ಬಗ್ಗೆ ಸುಳಿವು ಸಿಕ್ಕ ತಕ್ಷಣ ಅರಣ್ಯ ಸಿಬ್ಬಂದಿಯವರು ಸ್ಥಳಕ್ಕೆ ಧಾವಿಸಿ ಕಳ್ಳ ಸಾಗಾಣಿಕೆಗೆ ಶೇಕರಿಸಿಟ್ಟಿರುವ ಮಾಲನ್ನು ವಶಪಡಿಸಿಕೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಯಾರನ್ನೂ ಬಂಧಿಸುವ ಸಾಧ್ಯತೆಯಿರುವುದಿಲ್ಲ.

ಕೆಲವು ಪ್ರಕರಣಗಳಲ್ಲಿ ವಾಹನ, ಪಾಲಿನ ಸಹಿತ ವಾಹನದಲ್ಲಿರುವವರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರು ಮಾಡಲಾಗುತ್ತದೆ. ಆದರೆ ಅವರು ಕಳ್ಳ ಸಾಗಾಣಿಕೆಯ ಬಗ್ಗೆ ಯಾವ ತಿಳುವಳಿಕೆಯೂ ಇಲ್ಲವೆಂದೂ ಕಳ್ಳ ಸಾಗಾಣಿಕೆದಾರರ ಜೊತೆ ಸೇರಿದ್ದಾರೆಂಬ ಬಗ್ಗೆ ಸಾಕಷ್ಟು ಆಧಾರಗಳಿಲ್ಲದೇ ಬಿಡುಗಡೆಯಾಗುವ ಸಂಭವವಿರುತ್ತದೆ.

ತಮಿಳುನಾಡಿನ ವೀರಪ್ಪನ್ ಮತ್ತು ಸಂಗಡಿಗರನ್ನು ಹಿಡಿಯಲು ತಮಿಳುನಾಡು ಪೋಲೀಸ್ ಮತ್ತು ಅರಣ್ಯ ಇಲಾಖೆಯೊಂದಿಗೆ ಸಮನ್ವಯ ಹೊಂದಿದ್ದು ಕಾರ್ಯ ನಿರ್ವಹಿಸಲಾಗುತ್ತಿದೆ. ಈ ತಂಡದ ಕೆಲವರನ್ನು ಈಗಾಗಲೇ ಬಂದಿಸಲಾಗಿದೆ, ಹಾಗೂ ಆಯಕಟ್ಟಿನ ಪ್ರದೇಶಗಳಲ್ಲಿ ಗಸ್ತು ತಿರುಗುವಿಕೆಯನ್ನು ಹೆಚ್ಚಿಸಲಾಗಿದೆ.

ವರ್ಷ	ಸರ್ಕಾರವು ದಾಖಲು ಮಾಡಿರುವ ಪ್ರಕರಣಗಳ ಸಂಖ್ಯೆ		ಸರ್ಕಾರವು ಮುಟ್ಟುಗೋಲು ಹಾಕಿಕೊಂಡಿರುವ ವಾಹನಗಳ ಸಂಖ್ಯೆ	ಸರ್ಕಾರವು ವಶಪಡಿಸಿಕೊಂಡಿರುವ ಶ್ರೀಗಂಧ		ಸರ್ಕಾರವು ವಶಪಡಿಸಿಕೊಂಡಿರುವ ಆನೆ ದಂತ	
	ಶ್ರೀಗಂಧ	ಆನೆ ದಂತ		ಪ್ರಮಾಣ ಟನ್ನುಗಳಲ್ಲಿ	ಮೌಲ್ಯ ರೂ.ಗಳಲ್ಲಿ	ಪ್ರಮಾಣ ಕೆ.ಜಿ.ಗಳಲ್ಲಿ	ಮೌಲ್ಯ ರೂ.ಗಳಲ್ಲಿ
೧	೨	೩	೪	೫	೬	೭	೮
೧೯೮೬–೮೭	೬೯೭	೦	೮೭	೪೯೮.೦೭	೧,೯೫,೮೨,೦೦೦	—	—
೧೯೮೭–೮೮	೭೭೧	೦	೧೪೬	೩೭೦	೨,೪೫,೯೫ ೦೦೦	—	—
೧೯೮೮–೮೯	೯೫೦	೧	೧೫೮	೩೩೧ ೨೫೫	೧,೯೨,೩೨,೦೦೦	೪೭.೪೫	೭೫,೯೨೦
೧೯೮೯–೯೦	೮೬೦	೦	೧೧೯	೩೨೭.೨೦೫	೧,೮೭,೯೫.೦೦೦	—	—